**37** ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಲಯ, ಬೆಂಗಳೂರು

ಸಿ.ಸಿ. ನಂ. **13412/2019**

ಪ್ರಾ.ಸಃ **5** ಚಾ.ಸಃ **3**

| | |
|---|---|
| ಸಾಕ್ಷಿದಾರರ ಹೆಸರು | ಶಿವ ಪ್ರಕಾಶ್ |
| ತಂದೆಯ ಹೆಸರು | ಮುನಿರಾಂ |
| ವಯಸ್ಸು | 29 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಿಳಾಸ | ಇಸ್ರೋ ಲೇಔಟ್,ಬೆಂಗಳೂರು. |
| ಪ್ರ. ವ. ಬೋ ದಿನಾಂಕ | 30/12/2022. |

ಮುಖ್ಯ ವಿಚಾರಣೆಃ ಮಾನ್ಯ ಹಿ.ಸ.ಸ. ಅ ರವರಿಂದಃ

ನನಗೆ ಚಾಸಾ.1 ರವರ ಪರಿಚಯವಿದೆ ಮತ್ತು ಆರೋಪಿತರ ಪರಿಚಯ ಇಲ್ಲ. ಚಾಸಾ.1 ರವರ ಮಗ ಸುಪ್ರಜಿತ್ ಈತನ ಬಳಿ ನಾನು ನನ್ನ ದ್ವಿ ಚಕ್ರ ವಾಹನವನ್ನು ಸರ್ವಿಸ್ ಗೆ ಕೊಡುತ್ತಿದ್ದೆ ಅದೇ ರೀತಿ ದಿ. 31/08/2018 ರಂದು ಸಂಜೆ 06.30 ಗಂಟೆ ಸಮಯಕ್ಕೆ ನಾನು ನನ್ನ ಬೈಕನ್ನು ಚಾಸಾ.4 ರವರ ಬಳಿ ಸರ್ವಿಸ್ ಗೆ ಬಿಟ್ಟಿದ್ದು ಸದರಿ ಬೈಕನ್ನು ವಾಪಸ್ಸು ಪಡೆಯಲು ಹೋಗಿದ್ದಾಗ ಚಾಸಾ.1 ಮತ್ತು ಅವರ ಸ್ನೇಹಿತರ ಜೊತೆ ಮಾತನಾಡುತ್ತಾ ಕುಳಿತಿದ್ದಾಗ ಈಗ ನ್ಯಾಯಲಯದ ಮುಂದೆಯಿರುವ ಆರೋಪಿತರು ಚಾಸಾ.1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಈ ಆಸ್ತಿಗೂ ನಿನಗೂ ಏನೂ ಸಂಬಂಧ ಇದೆ ಎಂದು ಹೇಳಿ ಒಂದು ಹೆಲ್ಮೆಟ್ ನಿಂದ ಒಂದನೇ ಆರೋಪಿ ಚಾಸಾ.1 ರವರಿಗೆ ಹಲ್ಲೆ ಮಾಡಿರುತ್ತಾನೆ. ಆಗ ಚಾಸಾ.1 ರವರು ಒಂದನೇ ಆರೋಪಿತನ ಕುತ್ತಿಗೆ ಪಟ್ಟಿ ಹಿಡಿದುಕೊಂಡಿದ್ದು ಆಗ ಎರಡನೇ ಆರೋಪಿ ಚಾಸಾ.1 ರವರನ್ನು ಹಿಡಿದು ಎಳೆದಾಡಿದ್ದು ಆಗ ಚಾಸಾ.1 ರವರ ಬೌಸ್ ಹರಿದು ಹೋಗಿರುತ್ತದೆ. ಗಲಾಟೆಯಲ್ಲಿ ಒಂದನೇ ಆರೋಪಿ ಸಹ ಕೆಳಗೆ ಬಿದ್ದು ಗಾಯವಾಗಿರುತ್ತದೆ. ಆಗ ಅಲ್ಲಿದ್ದ ನಾವು ಜಗಳ ಬಿಡಿಸಿರುತ್ತೇವೆ. ಘಟನೆ ಕುರಿತು ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಆರೋಪಿತರು ಹಲ್ಲೆ ಮಾಡಿದ ಹೆಲ್ಮೆಟ್ ನ್ನು ಈಗ ನ್ಯಾಯಲಯದ ಮುಂದೆ ನೋಡಿ ಗುರುತಿಸುತ್ತೇನೆ. ಅದನ್ನು ಈಗಾಗಲೇ ಎಂ.ಒ-1 ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ ಶ್ರೀ  ಜಿ.ಐ.ಕೆ. ಆರೋಪಿ ಪರ ವಕೀಲರಿಂದಃ

ನಾನು ಸಂಜೆ 06.50 ಕ್ಕೆ ಒಂದನೇ ಆರೋಪಿ ಪೊ.ಠಾಣೆಯಲ್ಲಿ ಇದ್ದ ಎಂದರೆ ನನಗೆ ಗೊತ್ತಿಲ್ಲ. ಚಾಸಾ.1 ರವರ ಜೊತೆ ಇದ್ದ ಅವರ ಸ್ನೇಹಿತರ ಹೆಸರು ನನಗೆ ಗೊತ್ತಿಲ್ಲ. ಚಾಸಾ.4 ರವರು ಅವರ ಮನೆಯ ಹತ್ತಿರವೇ ಬೈಕ್ ಶಾಪ್ ಇಟ್ಟುಕೊಂಡು ಕೆಲಸ ಮಾಡುತ್ತಾರೆ. ಆ ಸ್ಥಳದಲ್ಲಿ ಗ್ಯಾರೇಜ್ ಇಲ್ಲ ಎಂದರೆ ಸರಿಯಲ್ಲ ಆದರೆ ಅದು ಅಂಗಡಿ ತರ ಇರುವುದಿಲ್ಲ. ಸದರಿ ಅಂಗಡಿಗೆ ಯಾವುದೇ ಬೋರ್ಡ್ ಹಾಕಿರುವುದಿಲ್ಲ. ಚಾಸಾ.4 ಮೊದಲಿನಿಂದ ನನ್ನ ಸ್ನೇಹಿತ ಎಂದರೆ ಸರಿಯಲ್ಲ. ಚಾಸಾ.1 ರವರಿಗೆ ಹಲ್ಲೆ ಮಾಡಿದ ಹೆಲ್ಮೆಟ್ ಬಿಳಿ ಬಣ್ಣದಾಗಿರುತ್ತದೆ. ಗಲಾಟೆಯಾದ ಸ್ಥಳದಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿಯಲ್ಲ. ಗಲಾಟೆಯ ಸ್ಥಳದಲ್ಲಿ ನಾನು ಮತ್ತು ನನ್ನ ಸ್ನೇಹಿತರನ್ನು ಸೇರಿಸಿ ಒಟ್ಟು 4 ಜನ ಇದ್ದೇವು. ಆರೋಪಿತರನ್ನು ಈ ಮೊದಲು ನಾನು ನೋಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆ ದಿನ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ಚಾಸಾ.4 ನನ್ನ ಸ್ನೇಹಿತನಾಗಿದ್ದ ಕಾರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ದಿನ ಯಾವುದೇ ಗಲಾಟೆಯಾಗಿಲ್ಲ ಮತ್ತು ನಾನು ಗಲಾಟೆಯನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿಯಲ್ಲ. ಆ ದಿನ ಚಾಸಾ.1 ರವರ ಗ್ರೇ ಬಣ್ಣದ ಬೌಸ್ ಹರಿದಿರುತ್ತದೆ.

ಮರುವಿಚಾರಣೆಃ   ಇಲ್ಲ

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ.ಹೇ. ಕೇ. ಸ. ಇ. ಒ

**37** ನೇ ಅ.ಮು. ಮ. ದಂ. ನ್ಯಾ